ಗುಜರಾತಿನ ಎಲ್ಲ ಸಾರ್ವಜನಿಕ ಪಂಚಾಯತಿ ವಾಚನಾಲಯ ಗಳಲ್ಲಿಯೂ ದೊರಕುವ ಹಾಗೆ ಮಾಡಿದರು. ಆ ವರುಷ ನ್ಯಾಷನಲ್ ಬುಕ್‌ಟ್ರಸ್ಟ್‌ನವರು ಆಶ್ರಮದ ಪ್ರಕಟಣೆಯಾದ, 'ಸ್ವಾಮಿ ವಿವೇಕಾನಂದರ ಜೀವನ' ಎಂಬ ಪುಸ್ತಕಕ್ಕೆ ಮೊದಲನೆಯ ಬಹುಮಾನ ನೀಡಿದರು.

ಪ್ರಕಟಣಾ ಕಾರ್ಯವಲ್ಲದೆ ಸ್ವಾಮೀಜಿಯವರು, ಆಶ್ರಮವು ಬಡ ವಿದ್ಯಾರ್ಥಿಗಳಿಗಾಗಿ ನಡೆಸುತ್ತಿದ್ದ ವಿದ್ಯಾರ್ಥಿನಿಲಯದ ಅಭಿವೃದ್ಧಿ, ಔಷಧಾಲಯದ ಹೊಸ ಕಟ್ಟಡದ ನಿರ್ಮಾಣ, ಅಕ್ಕಪಕ್ಕದಲ್ಲಿದ್ದ ಭೂಮಿಯನ್ನು ಖರೀದಿಸುವುದು ಮುಂತಾದ ಅನೇಕ ಕಾರ್ಯ ಗಳನ್ನು ಕೈಗೊಂಡು, ಆಶ್ರಮವನ್ನು ಸರ್ವತೋಮುಖವಾಗಿ ಅಭಿವೃದ್ಧಿಪಡಿಸಿದರು. ಅಂದಿನ ರಾಷ್ಟ್ರಪತಿಗಳಾದ ಡಾ. ರಾಜೇಂದ್ರ ಪ್ರಸಾದರು ಔಷಧಾಲಯ ಕಟ್ಟಡದ ಉದ್ಘಾಟನೆ ಮಾಡಿದರು.

ರಾಜ್‌ಕೋಟ್ ವಿದ್ಯಾರ್ಥಿನಿಲಯದ ಹಳೆಯ ವಿದ್ಯಾರ್ಥಿ ಯಾದ ಶ್ರೀ ಪಾಂಡ್ಯ ಎನ್ನುವವರು ಈಗ ಅಮೇರಿಕದಲ್ಲಿದ್ದಾರೆ. ಅವರು ಸ್ವಾಮಿ ಭೂತೇಶಾನಂದಜಿ ಅವರ ನೆನಪುಗಳನ್ನು ಹೀಗೆ ಬರೆಯುತ್ತಾರೆ: "ನಾವು ಸ್ವಾಮೀಜಿಯವರಿಂದ ಜೀವನದ ಮೌಲ್ಯಗಳನ್ನು ಕಲಿತೆವು. ಯಾವುದೇ ಕೆಲಸವಾಗಲಿ, ಅದನ್ನು ಗೌರವದಿಂದ ಕಾಣಬೇಕೆಂಬುದನ್ನು ಅವರು ನಮಗೆ ಮನದಟ್ಟು ಮಾಡಿಸಿದ್ದರು. ನಮ್ಮೊಡನೆ ಅವರೂ ಪ್ರತಿದಿನ ಮುಂಜಾನೆಯ ಹಾಗೂ ಸಂಜೆಯ ಪ್ರಾರ್ಥನೆಯಲ್ಲಿ ಭಾಗವಹಿಸುತ್ತಿದ್ದರು. ನಮ್ಮಲ್ಲಿ ಯಾರಾದರೂ ಖಾಯಿಲೆ ಬಿದ್ದರೆ, ತಾಯಿಯಂತೆ ಶುಶ್ರೂಷೆಯನ್ನು ಮಾಡುತ್ತಿದ್ದರು. ಅದಲ್ಲದೆ ಅವರು ನಮಗೆ ಇಂಗ್ಲಿಷ್ ಹಾಗೂ ಸಂಸ್ಕೃತ ಕಲಿಯಲು ಸಹಾಯ ಮಾಡುತ್ತಿದ್ದರು. ಯಾರಿಗಾದರೂ ಕಡಮೆ ಅಂಕ ಬಂದು ಸಪ್ಪೆ ಮುಖ ಹಾಕಿಕೊಂಡಿದ್ದರೆ, ಅವರನ್ನು ಹುರಿದುಂಬಿಸಿ ಅವರಲ್ಲಿ ಹೊಸ ಚೇತನವನ್ನು ಮೂಡಿಸುತ್ತಿದ್ದರು. ಸ್ವಾಮೀಜಿಯವರು ಒಮ್ಮೊಮ್ಮೆ ನಮ್ಮ ತುಂಟಾಟಕ್ಕೂ ಬಲಿ ಯಾಗುತ್ತಿದ್ದರು. ಬೆಳಗಿನ ೪ ಗಂಟೆಗೆ ಘಂಟೆ ಹೊಡೆಯಬೇಕು. ಒಂದು ದಿನ ಅದು ೩ ಗಂಟೆಗೇ ಹೊಡೆಯಿತು. ಸ್ವಾಮೀಜಿಯವರು ಎಂದಿನಂತೆ ಘಂಟೆಯನ್ನು ಅನುಸರಿಸಿ, ಪ್ರಾರ್ಥನೆಗಾಗಿ ಮಂದಿರಕ್ಕೆ ಹೋದರು. ನಾವೆಲ್ಲರೂ ಪ್ರಾರ್ಥನಾ ಸಮಯವಾದ ೪.೩೦ ಗಂಟೆಗೇ ಎಂದಿನಂತೆ ಹೋದೆವು. ಬೆಳಗಿನ ತಿಂಡಿಯ ಸಮಯ ದಲ್ಲಿ ಸ್ವಾಮೀಜಿಯವರು ಇದರ ಬಗ್ಗೆ ವಿಚಾರಿಸಿದಾಗ, ಏಪ್ರಿಲ್ ೧ನೆಯ ತಾರೀಕು ಎಂದು ತಿಳಿದು, ನಮ್ಮೊಡನೆ ಅವರೂ ನಗ ಲಾರಂಭಿಸಿದರು; ಇದಕ್ಕಾಗಿ ಯಾರನ್ನೂ ಶಿಕ್ಷಿಸಲಿಲ್ಲ."

ಸ್ವಾಮಿ ಭೂತೇಶಾನಂದಜಿ ಅವರ ಜೊತೆಗೆ ಹಲವಾರು ವರುಷಗಳ ಕಾಲ ಸೇವೆ ಸಲ್ಲಿಸಿದ ಸ್ವಾಮಿ ಕ್ಷಾಂತಾನಂದರು ತಮ್ಮ ನೆನಪುಗಳಲ್ಲಿ ಹೀಗೆ ಬರೆಯುತ್ತಾರೆ: "ವಿದ್ಯಾರ್ಥಿನಿಲಯದ ಅಡುಗೆಯ ಮನೆಯ ಜವಾಬ್ದಾರಿಯನ್ನು ನನಗೆ ವಹಿಸಿದ್ದರು. ನನಗೆ ತಿಳಿದ ರೀತಿಯಲ್ಲಿ ಬಂಗಾಳಿ ಪದ್ಧತಿಯಲ್ಲಿ ಅಡುಗೆ ಮಾಡುತ್ತಿದ್ದೆ. ಹಲವಾರು ಸಾಮಾನುಗಳನ್ನು ಕೊಂಡುತಂದು ಅಡುಗೆ ಮಾಡಿದರೂ ಕೂಡ, ಬಹಳಷ್ಟನ್ನು ಚೆಲ್ಲಿಬಿಡಬೇಕಾಗಿತ್ತು. ಏಕೆಂದರೆ ಗುಜರಾತಿನ ಅಡುಗೆ ಹುಳಿ ಹಾಗೂ ಸಿಹಿ ಮಿಶ್ರಿತ; ಬಂಗಾಳದ ಅಡುಗೆಯಂತಲ್ಲ. ನಾನು ಸ್ವಾಮಿ ಭೂತೇಶಾನಂದರಿಗೆ ಈ ವಿಷಯವನ್ನು ತಿಳಿಸಿದಾಗ ಅವರು, "ನಿನಗೆ ಗುಜರಾತಿನ ಪದ್ಧತಿಯ ಹಾಗೆ ಅಡುಗೆ ಹೇಳಿಕೊಡುವ ಒಬ್ಬ ಶಿಕ್ಷಕರನ್ನು ಗೊತ್ತು ಮಾಡಿಕೊಡುತ್ತೇನೆ" ಎಂದರು. ಗುಜರಾತ್ ರಾಜ್ಯದ ಪ್ರಮುಖ ಇಂಜಿನೀರ್ ಅವರ ಶ್ರೀಮತಿಯವರಿಗೆ ಈ ಜವಾಬ್ದಾರಿಯನ್ನು ವಹಿಸಿದರು. ಒಬ್ಬ ಸಂನ್ಯಾಸಿ ತಮ್ಮ ಸಲುವಾಗಿ ಅಡುಗೆ ಕಲಿಯುವುದನ್ನು ಅಲ್ಲಿನ ಗುಜರಾತಿ ವಿದ್ಯಾರ್ಥಿಗಳು ಬಹಳವಾಗಿ ಮೆಚ್ಚಿಕೊಂಡರು. ಅದರ ಫಲವಾಗಿ ಮಾಡಿದ ಅಡುಗೆಯನ್ನು ಬಿಸಾಡುವುದು ತಪ್ಪಿತು. ಹೀಗೆ ಸ್ವಾಮಿ ಭೂತೇಶಾನಂದಜಿ ಅವರು ತಮ್ಮ ಹತ್ತಿರವಿದ್ದ ಎಲ್ಲರಿಗೂ ಪ್ರೀತಿ ಹಾಗೂ ಪ್ರೋತ್ಸಾಹವನ್ನು ನೀಡುತ್ತಿದ್ದರು."

ಸ್ವಾಮೀಜಿಯವರಿಗೆ ಬೇಲೂರುಮಠಕ್ಕೆ ವರ್ಗಾವಣೆಯಾದ ಸಂದರ್ಭದಲ್ಲಿ ಬೀಳ್ಕೊಡುಗೆ ಸಮಾರಂಭವನ್ನು, ರಾಜ್‌ಕೋಟ್‌ನ ಸೌರಾಷ್ಟ್ರ ಸರ್ಕಾರಿ ಅಸೆಂಬ್ಲಿ ಹಾಲಿನಲ್ಲಿ ಏರ್ಪಡಿಸಲಾಗಿತ್ತು. ಜನ ಕಿಕ್ಕಿರಿದು ಸೇರಿದ್ದ ಆ ಸಭೆಯಲ್ಲಿ ಮೂರು ಜನ ಮಂತ್ರಿಗಳೂ ಸೇರಿದಂತೆ, ಹಲವಾರು ಗಣ್ಯರು ಪಾಲ್ಗೊಂಡಿದ್ದರು. ಸುಮಾರು ೫೦ ಸಂಘಸಂಸ್ಥೆಗಳು ಪ್ರತ್ಯೇಕವಾಗಿ ಸ್ವಾಮೀಜಿಯವರಿಗೆ ಸನ್ಮಾನ ಮಾಡಿದವು. ಅವರು ಮಾಡಿದ ಕೆಲಸಗಳನ್ನು ಮೆಚ್ಚುತ್ತಾ ಬಹಳಷ್ಟು ಜನ ಭಾಷಣ ಮಾಡಿದರು. ಅವರಲ್ಲಿ ಒಬ್ಬರು ಹೇಳಿದ್ದು ಹೀಗೆ: "ಸ್ವಾಮೀಜಿಯವರನ್ನು ಇಲ್ಲಿಯೇ ಉಳಿಸಿಕೊಳ್ಳಲು ಬಹಳವಾಗಿ ಪ್ರಯತ್ನಪಟ್ಟೆವು. ಆದರೆ ನಾವು ವಿಫಲರಾಗಿದ್ದೇವೆ." ಮತ್ತೊಬ್ಬರು, "ಸ್ವಾಮೀಜಿಯವರು ಬೇಲೂರುಮಠಕ್ಕೆ ಹೋಗುತ್ತಿರುವುದು ಒಳ್ಳೆಯದೇ. ಏಕೆಂದರೆ ಇಂದಿನವರೆಗೂ ಗುಜರಾತಿನಿಂದ ಯಾರೊಬ್ಬರೂ ರಾಮಕೃಷ್ಣ ಮಹಾಸಂಘಕ್ಕೆ ಸೇರಿಕೊಂಡಿಲ್ಲ. ಈಗ ನಾವು ಹೆಮ್ಮೆಯಿಂದ ಹೇಳಬಹುದು, ಒಬ್ಬರು ಗುಜರಾತಿ ಸಾಧುಗಳು ಬೇಲೂರು ಮಠದಲ್ಲಿ ಇದ್ದಾರೆ ಎಂದು." (ಮೂಲತಃ ಬಂಗಾಳಿಗಳಾದ ಸ್ವಾಮೀಜಿಯವರು ಗುಜರಾತಿಗಳ ಪಾಲಿಗೆ ತಮ್ಮವರೇ ಆಗಿಬಿಟ್ಟದ್ದು ವಿಶೇಷ.)

ಈ ಸಂದರ್ಭದಲ್ಲಿ, 'ಕರ್ಮಯೋಗ'ದ ಬಗ್ಗೆ ಸ್ವಾಮಿ ಭೂತೇಶಾನಂದಜಿ ಅವರ ದೃಷ್ಟಿಕೋನವನ್ನು ತಿಳಿಯೋಣ. ಅವರು ಹೀಗೆ ಹೇಳುತ್ತಿದ್ದರು: **"ಎಷ್ಟು ದೊಡ್ಡ ಕೆಲಸವಾಗಿದೆ ಎಂಬುದು ಮುಖ್ಯವಲ್ಲ. ನಾವು ಯಾವ ರೀತಿಯಲ್ಲಿ ಆ ಕೆಲಸ ಮಾಡಿದ್ದೇವೆ ಎಂಬುದು ಮುಖ್ಯ. 'ನನ್ನ ಗುರಿಯನ್ನು ಲಕ್ಷ್ಯದಲ್ಲಿಟ್ಟುಕೊಂಡು ಕೆಲಸ ಮಾಡುತ್ತಿದ್ದೇನೆಯೇ?' ಎಂದು ಆಗಿಂದಾಗ್ಗೆ ನಮ್ಮನ್ನು ನಾವೇ ಪ್ರಶ್ನಿಸಿಕೊಳ್ಳಬೇಕು. ಈ ಅಳತೆಗೋಲು ಸರಿಯಾಗಿದ್ದರೆ ಮಾತ್ರ ನಿಜವಾಗಿ ನಾವು ಭಗವಂತನನ್ನು ಮನುಷ್ಯನಲ್ಲಿ ಪೂಜಿಸುತ್ತಿದ್ದೇವೆ ಎಂದರ್ಥ."**

೧೯೬೩ರಲ್ಲಿ ಸ್ವಾಮಿ ಭೂತೇಶಾನಂದಜಿ ಅವರು ರಾಮಕೃಷ್ಣ ಮಹಾಸಂಘದ ಟ್ರಸ್ಟಿಗಳಾದರು. ೧೯೬೬ಕ್ಕೆ ಬೇಲೂರು ಮಠಕ್ಕೆ ಹೋದ ಅವರು, ಸಹಕಾರ್ಯದರ್ಶಿಗಳಾಗಿ ಪರಿಹಾರ ಕಾರ್ಯಗಳ ಜವಾಬ್ದಾರಿ ಹೊತ್ತರು. ಅದಲ್ಲದೆ ಬ್ರಹ್ಮಚಾರಿಗಳ ಪ್ರಶಿಕ್ಷಣ ಕೇಂದ್ರದ ಆಚಾರ್ಯರಾಗಿಯೂ ಉತ್ತಮ ಸೇವೆ ಸಲ್ಲಿಸಿದರು. ಹಾಗೂ ಇನ್ನೂ ಬಹಳಷ್ಟು ಸೇವಾಕಾರ್ಯಗಳ ಜವಾಬ್ದಾರಿಗಳನ್ನೂ ಸಮರ್ಥವಾಗಿ ನಿರ್ವಹಿಸಿದರು. (*ಮುಂದುವರಿಯುವುದು*)

# ‘ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ’ಯಿಂದ

## ರಾಮಾನುಜಾಚಾರ್ಯರನ್ನು ಕುರಿತು



**ವಿ**ಶಿಷ್ಟಾದ್ವೈತ ಎಂದರೆ ವಿಶೇಷಣಗಳಿಂದ ಕೂಡಿದ ಅದ್ವೈತ. ಶ್ರೀರಾಮಾನುಜರು ಈ ಸಿದ್ಧಾಂತದ ಮೂಲಪ್ರತಿಪಾದಕರು. ರಾಮಾನುಜರು ವಿಶ್ವವನ್ನು **ಚಿತ್, ಅಚಿತ್** ಮತ್ತು **ಈಶ್ವರ** ಎಂದು ವಿಭಾಗಿಸುವರು. ಇದೇ ಪ್ರಜ್ಞೆ, ಅತಿಪ್ರಜ್ಞೆ ಮತ್ತು ಅತೀತಪ್ರಜ್ಞೆ.

ರಾಮಾನುಜರು ಪ್ರತಿಪಾದಿಸುವ ವಿಶಿಷ್ಟಾದ್ವೈತವಾದರೂ ಒಂದು ಆಂಶಿಕ ಏಕತಾ ಸತ್ಯವನ್ನು ಒಪ್ಪುತ್ತದೆ. ಇದು ಅದ್ವೈತಕ್ಕೆ ಸಮೀಪವಾಗಿದೆ. ವಿಶಿಷ್ಟ ಎಂದರೆ ಪ್ರತ್ಯೇಕ ಎಂದರ್ಥ. ಪ್ರತ್ಯೇಕತೆಯೇ ಜಗತ್ತಿನ ಸ್ವಭಾವ. ಇಲ್ಲಿ ಬದಲಾವಣೆಗಳು ಆಗುವುವು. ಬದಲಾಗುತ್ತಿರುವ ಭಾವನೆಗಳನ್ನು, ಬದಲಾಗುತ್ತಿರುವ ಪದಗಳ ಮೂಲಕ ವ್ಯಕ್ತಪಡಿಸಿ ನಿರುಪಾಧಿಕವನ್ನು ಪ್ರಮಾಣಪಡಿಸುವುದಕ್ಕೆ ಆಗುವುದಿಲ್ಲ. ಆಗ ಕೆಲವು ಗುಣಗಳನ್ನು ಕಳೆದುಕೊಂಡ ಯಾವುದೋ ಒಂದು ನಿಮಗೆ ದೊರಕುವುದೇ ಹೊರತು, ಅದು ‘ಬ್ರಹ್ಮ’ವಲ್ಲ.

ರಾಮಾನುಜಾಚಾರ್ಯರ ಸಂಕೋಚ–ವಿಕಾಸವಾದವು ಆಧುನಿಕ ವಿಕಾಸವಾದದಂತೆ ಮತ್ತು ಪುನರಾವರ್ತನಾ ವಾದದಂತೆ ಇದೆ. ಜೀವವು ಸಂಕುಚಿತವಾದಾಗ ಅದರ ಶಕ್ತಿ ಸುಪ್ತವಾಗುವುದು. ಪುನಃ ಒಳ್ಳೆಯ ಕರ್ಮದಿಂದ ಮತ್ತು ಒಳ್ಳೆಯ ಆಲೋಚನೆಯಿಂದ ವಿಕಾಸ ವಾಗಿ ತನ್ನ ಸ್ವಾಭಾವಿಕ ಪರಿಪೂರ್ಣತೆಯನ್ನು ಪ್ರಕಾಶಗೊಳಿಸು ವುದು. ಆದರೆ ಅದ್ವೈತಿಗಳು ಪ್ರಕೃತಿಯಲ್ಲಿ ಮಾತ್ರ ವಿಕಾಸವನ್ನು ಒಪ್ಪುವರು, ಆತ್ಮನಲ್ಲಿ ಅಲ್ಲ.

ರಾಮಾನುಜಾಚಾರ್ಯರ ಹೃದಯ ಬಹು ಉದಾರವಾಗಿತ್ತು. ಪತಿತರ ದುಃಖದಲ್ಲಿ ಅವರು ಭಾಗಿಯಾದರು, ಸಹಾನುಭೂತಿ ತೋರಿದರು. ಆ ಸಮಯದಲ್ಲಿ ಪ್ರಚಲಿತವಿದ್ದ ಅನುಷ್ಠಾನ ಪದ್ಧತಿಗಳನ್ನು ತೆಗೆದುಕೊಂಡು, ಸಾಧ್ಯವಾದಷ್ಟು ಅವನ್ನು ಶುದ್ಧೀಕರಿಸಿ, ಜನರಿಗೆ ಆವಶ್ಯಕವಾದ ಹೊಸ ಆಚಾರ, ಪೂಜಾ ವಿಧಾನ – ಇವನ್ನು ಜಾರಿಗೆ ತಂದರು. ಜೊತೆಗೆ ಸರ್ವೋಚ್ಚ ಆಧ್ಯಾತ್ಮಿಕ ಉಪಾಸನೆಯ ಬಾಗಿಲನ್ನು ಬ್ರಾಹ್ಮಣನಿಂದ ಚಂಡಾಲನವರೆಗೂ ತೆರೆದರು. ಇದೇ ರಾಮಾನುಜಾಚಾರ್ಯರ ಕಾರ್ಯ. ಈ ಕಾರ್ಯ ಹೀಗೇ ಸಾಗಿತು. ಕಾಲಾನಂತರ ಅದು ಉತ್ತರ ದೇಶಕ್ಕೂ ಹರಡಿತು. ಅಲ್ಲಿ ಕೆಲವರು ಮಹಾವ್ಯಕ್ತಿಗಳು ಇದನ್ನು ಸ್ವೀಕರಿಸಿದರು. ಅವರ ಕಾಲದಿಂದಲೂ ನೀವು ಒಂದನ್ನು ಗಮನಿಸಬಹುದು. ಅದೇ ಪ್ರತಿಯೊಬ್ಬರಿಗೂ ಆಧ್ಯಾತ್ಮಿಕವಿದ್ಯೆಯ ಅಧಿಕಾರವನ್ನು ನೀಡಿದುದು.

ಎಲ್ಲಿಯವರೆಗೆ ನಮಗೆ ದೇಹವಿದೆಯೋ, ಎಲ್ಲಿಯವರೆಗೆ ದೇಹವೇ ನಾವು ಎಂಬ ಭ್ರಾಂತಿಗೆ ಒಳಗಾಗಿರುವೆವೋ, ಎಲ್ಲಿಯವರೆಗೆ ನಮಗೆ ಪಂಚೇಂದ್ರಿಯಗಳಿವೆಯೋ, ಎಲ್ಲಿಯವರೆಗೆ ನಾವು ಬಾಹ್ಯ ಪ್ರಪಂಚವನ್ನು ನೋಡುತ್ತಿರುವೆವೋ, ಅಲ್ಲಿಯವರೆಗೆ ನಮಗೆ ಒಬ್ಬ ಸಗುಣ ದೇವರು ಬೇಕು. ಈ ಭಾವನೆಗಳೆಲ್ಲಾ ನಮ್ಮಲ್ಲಿ ಇರುವಾಗ ಶ್ರೀರಾಮಾನುಜಾಚಾರ್ಯರು ಹೇಳಿರುವಂತೆ, ಜೀವ, ಜಗತ್ತು ಮತ್ತು ದೇವರಿಗೆ ಸಂಬಂಧಪಟ್ಟ ಭಾವನೆಗಳನ್ನೆಲ್ಲಾ ನಾವು ಸ್ವೀಕರಿಸಬೇಕು. ಒಂದನ್ನು ಸ್ವೀಕರಿಸಿದರೆ ಮೂರನ್ನೂ ಸ್ವೀಕರಿಸಬೇಕು, ಬೇರೆ ವಿಧಿಯೇ ಇಲ್ಲ. ಎಲ್ಲಿಯವರೆಗೆ ನಾವು ಒಂದು ಬಾಹ್ಯಜಗತ್ತನ್ನು ನೋಡುವೆವೋ, ಅಲ್ಲಿಯವರೆಗೂ ಸಗುಣದೇವರನ್ನು ಮತ್ತು ಜೀವಿಯನ್ನು ಅಲ್ಲಗಳೆಯುವುದು ಬರಿಯ ಹುಚ್ಚುತನ.

ರಾಮಾನುಜರ ದೃಷ್ಟಿಯಲ್ಲಿ, **ಈಶ್ವರ, ಜೀವ, ಜಗತ್** – ಇವು ಶಾಶ್ವತವಾದುವು. ಜೀವಿಗಳು ಅನಾದಿ, ಎಂದೆಂದಿಗೂ ಇರುವುವು, ತಮ್ಮ ವ್ಯಕ್ತಿತ್ವವನ್ನು ಚಿರಕಾಲ ಇಟ್ಟುಕೊಂಡಿರುವುವು. ಎಂದೆಂದಿಗೂ ನಿಮ್ಮ ಮತ್ತು ನಮ್ಮ ಆತ್ಮ ಚಿರಕಾಲವೂ ಬೇರೆಯಾಗಿರುವುದು. ಅದರಂತೆಯೇ ಜೀವರಷ್ಟೇ ಮತ್ತು ದೇವರಷ್ಟೇ ಸತ್ಯವಾದ ಜಗತ್ತು ಕೂಡ ಬೇರೆಯಾಗಿರುವುದು. ದೇವರು ಜೀವಿಯಲ್ಲಿ ಹಾಸುಹೊಕ್ಕಾಗಿರುವನು, ಅದರ ಸಾರವಾಗಿರುವನು. ಅವನು ಅಂತರ್ಯಾಮಿ. ಈ ದೃಷ್ಟಿಯಿಂದ ರಾಮಾನುಜರು ಕೆಲವು ವೇಳೆ ಜೀವಾತ್ಮ ಪರಮಾತ್ಮರ ಸ್ವಭಾವ ಒಂದೇ ಎಂದು ಹೇಳುವರು. ಪ್ರಳಯದಲ್ಲಿ ಪ್ರಕೃತಿಯೆಲ್ಲಾ ಸಂಕುಚಿತವಾದಾಗ ಜೀವಿಗಳು ಸೂಕ್ಷ್ಮವಾಗಿ ಅಣುವಿನಂತೆ ಸ್ವಲ್ಪ ಕಾಲ ಇರುವುವು. ಕಲ್ಪದ ಆದಿಯಲ್ಲಿ ಇವೆಲ್ಲ ಪುನಃ ತಮ್ಮ ತಮ್ಮ ಕರ್ಮಕ್ಕೆ ತಕ್ಕಂತೆ ವ್ಯಕ್ತವಾಗಿ, ಪರಿಣಾಮ ಹೊಂದುವುವು. ಆತ್ಮನ ಪಾವಿತ್ರ್ಯವನ್ನು ಮತ್ತು ಪರಿಪೂರ್ಣತೆ ಯನ್ನು ಸಂಕುಚಿಸುವ ಪ್ರತಿಯೊಂದು ಕ್ರಿಯೆಯೂ ದುಷ್ಕರ್ಮ; ಈ ಗುಣಗಳು ವ್ಯಕ್ತವಾಗಿ ವಿಕಾಸವಾಗುವಂತೆ ಯಾವುದು ಮಾಡುವುದೋ ಅವೆಲ್ಲ ಪುಣ್ಯಕರ್ಮ ಎಂದು ರಾಮಾನುಜರು ಹೇಳುವರು. ಯಾವುದು ಆತ್ಮವಿಕಾಸಕ್ಕೆ ಸಹಾಯಮಾಡುವುದೋ ಅದು ಒಳ್ಳೆಯದು. ಯಾವುದು ಸಂಕೋಚವಾಗುವಂತೆ ಮಾಡುವುದೋ ಅದು ಕೆಟ್ಟದ್ದು. ಜೀವಿಯು ಭಗವಂತನ ದಯೆಯಿಂದ ಮೋಕ್ಷ ಪಡೆಯುವವರೆಗೂ ಸಂಕುಚಿತವಾಗುತ್ತಾ, ವಿಕಾಸವಾಗುತ್ತಾ ಹೋಗುವುದು. ಯಾರು ಪರಿಶುದ್ಧರೋ, ಭಗವಂತನ ದಯೆಗೆ ಹೋರಾಡುವರೋ ಅವರಿಗೆಲ್ಲಾ ಆ ದಯೆ ದೊರಕುವುದು.

ರಾಮಾನುಜರು ವಿಗ್ರಹಾರಾಧನೆಗೆ ಹೆಚ್ಚು ಪ್ರೋತ್ಸಾಹವನ್ನು ಕೊಡುತ್ತಿದ್ದರು. ಮುಕ್ತಿಗೆ ಶ್ರದ್ಧಾಭಕ್ತಿಗಳು ಅತ್ಯಂತ ಮುಖ್ಯ ಎಂಬುದನ್ನು ಅವರು ಬಳಕೆಗೆ ತಂದರು. ✶